# ಹೆದ್ದಾರಿಯಂಚಿನಲ್ಲಿ ಹಣ್ಣು-ಹೂವುಗಳ ಗಿಡ ನೆಡುವ ಕಾರ್ಯ



**ಕಾರವಾರ:** ತಾಲೂಕಿನ ಕೊಳಗೆ, ಅಸ್ನೋಟಿ ಮುಂತಾದ ಗ್ರಾಮಗಳಲ್ಲಿ ಹೆದ್ದಾರಿಯಂಚಿಗೆ ಹೂವು, ಹಣ್ಣಿನ ಗಿಡಗಳನ್ನು ನೆಡುವ ಕಾರ್ಯವನ್ನು ಅರಣ್ಯ ಇಲಾಖೆ ಆರಂಭಿಸಿದೆ.

ಗ್ರಾಮೀಣ ವಿಶೇಷ ಯೋಜನೆಯಡಿ ಇಲಾಖೆ ರಸ್ತೆಯಂಚಿನಲ್ಲಿ ಈ ರೀತಿ ಗಿಡಗಳನ್ನು ನೆಡುವ ಕಾರ್ಯವನ್ನು ಪ್ರತಿ ವರ್ಷ ನಡೆಸುತ್ತದೆ. ಗೋಪಶಿಟ್ಟಾ ಅರಣ್ಯ ವಲಯ ವ್ಯಾಪ್ತಿಯಲ್ಲಿ 10 ಕಿ.ಮೀ. ಉದ್ದದ ರಸ್ತೆಗೆ ಈ ರೀತಿ ಸಸಿಗಳನ್ನು ನೆಡಲು ಯೋಜನೆ ಹಮ್ಮಿಕೊಳ್ಳಲಾಗಿದೆ. ಒಂದೂವರೆ ಸಾವಿರ ಸಸಿಗಳನ್ನು ನೆಡಲಾಗುತ್ತಿದ್ದು, ಇವೆಲ್ಲವೂ ಮಾವು, ಹಲಸು, ನೇರಳೆ, ಹೊನ್ನೆ, ಹೊಳೆ ದಾಸವಾಳ, ಮಹಾಗನಿ ಮುಂತಾದ ಹಣ್ಣು ಮತ್ತು ಹೂವಿನ ಫಲ ಕೊಡುವ ಗಿಡಗಳಾಗಿವೆ. ಪ್ರತಿ 14 ಅಡಿಗೆ ಒಂದು ಗಿಡ ನೆಡಲಾಗುತ್ತಿದ್ದು, ಗಿಡ ನೆಟ್ಟ ನಂತರ ಟ್ರೀಗಾರ್ಡ್ ಕೂಡ ಅಳವಡಿಕೆ ಮಾಡುತ್ತಿದ್ದೇವೆ ಎಂದು ಗೋಪಶಿಟ್ಟಾ ಆರ್‌ಎಫ್‌ಓ ರಾಘವೇಂದ್ರ ನಾಯ್ಕ ತಿಳಿಸಿದರು.

ಮಳೆಗಾಲ ಆರಂಭದ ವೇಳೆ ಪ್ರತಿ ವರ್ಷ ಈ ರೀತಿ ಗಿಡಗಳನ್ನು ನೆಡಲಾಗುತ್ತದೆ. ನೆಟ್ಟ ಗಿಡಗಳ ಆರೈಕೆಯನ್ನೂ ಅರಣ್ಯ ಇಲಾಖೆ ಮಾಡುತ್ತಿದೆ. ಮಾಜಾಳಿಯಿಂದ ಗೋಪಶಿಟ್ಟಾವರೆಗೆ ಈ ಬಾರಿ ಗಿಡ ನೆಡುವ ಗುರಿ ಇದೆ. ಇದರಿಂದ ರಸ್ತೆಯಂಚಿನಲ್ಲಿ ನೆರಳು ಒದಗಿಸುವ ಜೊತೆಗೆ ಜನರಿಗೆ ಭವಿಷ್ಯದಲ್ಲಿ ಹೂವು, ಹಣ್ಣುಗಳು ಸಿಗುವಂತಾಗುತ್ತದೆ. ಇಲಾಖೆಯ ಕಾರ್ಯಕ್ಕೆ ಸಾರ್ವಜನಿಕರು ಸಹಕಾರ ನಿಡಿದರೆ ಉತ್ತಮ. ನೆಟ್ಟ ಗಿಡಗಳನ್ನು ಕೀಳುವ ಅಥವಾ ಹಾಳು ಮಾಡುವ ಕೆಲಸವನ್ನು ಸಾರ್ವಜನಿಕರು ನಡೆಸದಂತೆಯೂ ವಿನಂತಿಸಿದ್ದಾರೆ.